compose.kerala.gov.in
egazette.kerala.gov.in
printing.kerala.gov.in

Regn.No. KERBIL/2012/45073
dated 2012-09-05 with RNI
Reg No.KL/TV(N)/634/2021-2023

കേരള സർക്കാർ
GOVERNMENT OF KERALA

കേരള ഗസറ്റ്
KERALA GAZETTE

ആധികാരികമായി പ്രസിദ്ധപ്പെടുത്തുന്നത്
PUBLISHED BY AUTHORITY

ചൊവ്വ, 2026 മെയ് 26
Tuesday, 26th May 2026

1201 ഇടവം 12
12th Idavam 1201

1948 ജ്യേഷ്ഠം 5
5th Jyaishta 1948

വാല്യം 15
Vol. XV

നമ്പർ **21**
No.

Part I -Section (iii)

Law Department

©
കേരള സർക്കാർ
GOVERNMENT OF KERALA
2026

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಜಿ) ಇಲಾಖೆ

ಅಧಿಸೂಚನೆ

ನಂಬ್ರ 118/ಲೆಗ್. ಜಿ1/2025/ಕಾನೂನು. ತಿರುವನಂತಪುರಂ, *2026* ಫೆಬ್ರುವರಿ *9*, / *1201* ಮಕರ *26*/ *1947* ಮಾಘ *20*.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2026 ಫೆಬ್ರುವರಿ 4ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಜಿ. ಎಸ್. ಆಶ,
ವಿಶೇಷ ಕಾರ್ಯದರ್ಶಿ (ಕಾನೂನು).

2026ರ 1ನೇ ಅಧಿನಿಯಮ

2025ರ ಕೇರಳ ಅರಣ್ಯ (ತಿದ್ದುಪಡಿ) ಅಧಿನಿಯಮ

1961ರ ಕೇರಳ ಅರಣ್ಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1961ರ ಕೇರಳ ಅರಣ್ಯ ಅಧಿನಿಯಮವನ್ನು (1962ರ 4) ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

1. ಸಂಕ್ಷಿಪ್ತನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ಅರಣ್ಯ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 2ನೇ ವಿಭಾಗದ ತಿದ್ದುಪಡಿ.—1961ರ ಕೇರಳ ಅರಣ್ಯ ಅಧಿನಿಯಮದ (1962ರ 4) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು), 2ನೇ ವಿಭಾಗದ, (ಸಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

"(ಸಿ) "ಅರಣ್ಯ ಅಧಿಕಾರಿ" ಎಂದರೆ ಒಬ್ಬ ಪ್ರಿನ್ಸಿಪಲ್ ಚೀಫ್ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಅಡೀಷನಲ್ ಪ್ರಿನ್ಸಿಪಲ್ ಚೀಫ್ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಚೀಫ್ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಡೆಪ್ಯೂಟಿ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಅಸಿಸ್ಟಂಟ್ ಫಾರೆಸ್ಟ್ ಕನ್ಸರ್ವೇಟರ್ ಅಥವಾ ಡಿವಿಷನಲ್ ಫಾರೆಸ್ಟ್ ಅಧಿಕಾರಿ ಅಥವಾ ವೈಲ್ಡ್ ಲೈಫ್ ವಾರ್ಡನ್ ಅಥವಾ ಅಸಿಸ್ಟೆಂಟ್ ವೈಲ್ಡ್ ಲೈಫ್ ವಾರ್ಡನ್ ಅಥವಾ ರೇಂಜ್ ಫಾರೆಸ್ಟ್ ಅಧಿಕಾರಿ ಅಥವಾ ಡೆಪ್ಯೂಟಿ ರೇಂಜ್ ಫಾರೆಸ್ಟ್ ಅಧಿಕಾರಿ ಅಥವಾ ಸೆಕ್ಷನ್ ಫಾರೆಸ್ಟ್ ಅಧಿಕಾರಿ ಅಥವಾ ದಿಮ್ಮಿ ಡಿಪೋ ಅಧಿಕಾರಿ ಅಥವಾ ಬೀಟ್ ಫಾರೆಸ್ಟ್ ಅಧಿಕಾರಿ ಅಥವಾ ಫಾರೆಸ್ಟ್ ಬೀಟ್ ಅಸಿಸ್ಟೆಂಟ್ (ಬಂಧನ ಉದ್ದೇಶದ ಹೊರತು) ಅಥವಾ ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮ ಪ್ರಕಾರ ಒಬ್ಬ ಅರಣ್ಯ ಅಧಿಕಾರಿಯ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಹೆಸರಿಸುವ ಅಥವಾ ಸರಕಾರದ ಆದೇಶಗಳ ಪ್ರಕಾರ ಅಥವಾ ಅದರಡಿಯಲ್ಲಿ ಒಂದು ಉದ್ಯೋಗ ವಹಿಸಲು ನೇಮಕಗೊಳ್ಳುವ ಯಾವುದೇ ವ್ಯಕ್ತಿ ಎಂದರ್ಥ.".

3. 47ಬ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 47ಬ ವಿಭಾಗದ (2)ನೇ ಉಪ-ವಿಭಾಗದಲ್ಲಿ,—

(ಎ) "ತನ್ನ ಸ್ವಂತ ಉಪಯೋಗಕ್ಕಾಗಿ ಒಂದು ಕಟ್ಟಡವನ್ನು ನಿರ್ಮಿಸುವುದಕ್ಕಾಗಿ ಆ ಪ್ರದೇಶವನ್ನು ಬೊಕ್ಕಟ ಮಾಡಲು ಸಾಧ್ಯವಾಗುವ ರೀತಿಯಲ್ಲಿ ಮರವನ್ನು ಕಡೆಯುವುದಾದಲ್ಲಿ" ಎಂಬ ಪದಗಳ ನಂತರ "ಅಥವಾ ಅರಣ್ಯ ಇಲಾಖೆಯ ಮುಖೇನ ಮಾರಾಟ ಮಾಡುವುದಕ್ಕಾಗಿದ್ದಲ್ಲಿ ಅಥವಾ ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಮರದ ವಯಸ್ಸನ್ನು ಪರಿಗಣಿಸದೆ ಇತರ ಯಾವುದೇ ಸದುದ್ದೇಶದ ಬಳಕೆಗಾಗಿದ್ದಲ್ಲಿ" ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಬಿ) ಅಸ್ತಿತ್ವದಲ್ಲಿರುವ ಷರತ್ತಿಗೆ ಬದಲು ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ, (2)ನೇ ಉಪ-ವಿಭಾಗದ ಪ್ರಕಾರದ ಮಾರಾಟಕ್ಕೆ ಮತ್ತು ಸದುದ್ದೇಶದ ಬಳಕೆಗಿರುವ ಉಪಬಂಧವು, ಭೂಮಿಯನ್ನು ಹಂಚಿಕೊಡುವ ವೇಳೆಯಲ್ಲಿ ಸರಕಾರವು ಕಾಯ್ದಿರಿಸಿರುವ ಶ್ರೀಗಂಧದ ಮರಗಳು ಯಾವುದಾದರು ಇದ್ದಲ್ಲಿ ಅವುಗಳಿಗೋ, 1986ರ ಕೇರಳ ವೃಕ್ಷ ಸಂರಕ್ಷಣಾ ಅಧಿನಿಯಮದ (1986ರ 35) 5ನೇ ವಿಭಾಗ ಅಡಿಯಲ್ಲಿ ಅಧಿಸೂಚಿಸಲ್ಪಟ್ಟ ಯಾವುದೇ ಭೂಮಿಯಲ್ಲಿರುವ ಶ್ರೀಗಂಧದ ಮರಗಳಿಗೋ, 2003ರ ಕೇರಳ ಅರಣ್ಯ (ಪರಿಸರ ವೈಜ್ಞಾನಿಕವಾಗಿ ಶಿಥಿಲವಾದ ಭೂಪ್ರದೇಶಗಳ ನಿರ್ವಹಣೆ ಮತ್ತು ನಿಹಿತಗೊಳಿಸುವಿಕೆ) ಅಧಿನಿಯಮದ (2005ರ 21) ಅಡಿಯಲ್ಲಿ ಪಾಲಕನು ಅಧಿಸೂಚಿಸಿರುವ ಪ್ರದೇಶಗಳಿಗೋ ಅನ್ವಯಿಸತಕ್ಕದ್ದಲ್ಲ.".

4. 47ಇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 47ಇ ವಿಭಾಗದಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ, "ಅಧಿಕೃತ ಅಧಿಕಾರಿ" ಎಂಬ ಪದಗಳಿಗೆ ಬದಲಾಗಿ "ಅರಣ್ಯ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) "ಅಧಿಕೃತ ಅಧಿಕಾರಿ" ಎಂಬ ಪದಗಳಿಗೆ ಬದಲಾಗಿ "ಅರಣ್ಯ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

5. 53ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 53ನೇ ವಿಭಾಗದಲ್ಲಿ, "ರೇಂಜರ್ಸ್" ಎಂಬ ಪದಗಳಿಗೆ ಬದಲಾಗಿ "ರೇಂಜ್ ಫಾರೆಸ್ಟ್ ಆಫೀಸರ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು.

6. 64ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 64ನೇ ವಿಭಾಗದಲ್ಲಿ, "ರೇಂಜರ್ಸ್" ಎಂಬ ಪದಗಳಿಗೆ ಬದಲಾಗಿ "ರೇಂಜ್ ಫಾರೆಸ್ಟ್ ಆಫೀಸರ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು.

7. 68ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 68ನೇ ವಿಭಾಗದಲ್ಲಿ, (1)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಅಸಿಸ್ಟೆಂಟ್ ಫಾರೆಸ್ಟ್ ಕನ್ಸರ್ವೇಟರ್ ದರ್ಜೆಗಿಂತ ಕಡಿಮೆಯಲ್ಲದ ಯಾವುದೇ ಅರಣ್ಯ ಅಧಿಕಾರಿಗೆ,—

(ಎ) 47ಜಿ ವಿಭಾಗದ, 62ನೇ ವಿಭಾಗದ ಅಥವಾ 65ನೇ ವಿಭಾಗದ ಅಡಿಯಲ್ಲಿ ಶಿಕ್ಷಾರ್ಹವಾದ ಒಂದು ಅಪರಾಧದ ಹೊರತಾದ ಅರಣ್ಯಕ್ಕೆ ಸಂಬಂಧಿಸಿದ ಯಾವುದೇ ಅಪರಾಧವನ್ನು ಮಾಡಿರುವುದಾಗಿ ಸಮಂಜಸವಾಗಿ ಶಂಕಿಸಲಾದ ಯಾವುದೇ ವ್ಯಕ್ತಿಯಿಂದ, ಅಧಿನಿಯಮ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಪ್ರಕಾರ ಅಪರಾಧಕ್ಕೆ ನಿಗದಿಪಡಿಸಲಾದ ಗರಿಷ್ಠ ದಂಡ ಮೊತ್ತಕ್ಕೆ

This is a digitally signed Gazette.
Authenticity may be verified through https://compose.kerala.gov.in/

ಸಮಾನವಾದ ಒಂದು ಮೊತ್ತವನ್ನು, ಆತನು ಮಾಡಿರಬಹುದಾದ ಅಪರಾಧಕ್ಕೆ ನಷ್ಟಪರಿಹಾರವಾಗಿ ಪಡೆಯಬಹುದಾಗಿದೆ ಮತ್ತು ಮುಟ್ಟುಗೋಲು ಹಾಕಲಾದ ಯಾವುದೇ ಆಸ್ತಿಯನ್ನು ವಶಪಡಿಸಿಕೊಂಡಿದ್ದಲ್ಲಿ ಅಂತಹ ಅಧಿಕಾರಿಯು ಅದಕ್ಕೆ ಲೆಕ್ಕಹಾಕಿದ ಮೌಲ್ಯವನ್ನು ಪಾವತಿಸುವುದಾದಲ್ಲಿ ಅದನ್ನು ಬಿಡುಗಡೆಗೊಳಿಸುವುದೋ ಅಂತಹ ಆಸ್ತಿಯನ್ನು ಸರಕಾರಕ್ಕೆ ಮುಟ್ಟುಗೋಲುಹಾಕುವುದು ಮಾಡಬಹುದಾಗಿದೆ.

(ಬ) ಪ್ರೋಸಿಕ್ಯೂಶನ್ ಕ್ರಮವನ್ನು ಪ್ರಾರಂಭಿಸಿದ ನಂತರ, ಅಪಾದಿತ ವ್ಯಕ್ತಿಯ ಅರ್ಜಿಯ ಮೇರೆಗೆ, ಅಂತಹ ವ್ಯಕ್ತಿಯ ಮೇಲೆ ಆರೋಪಿಸಲಾದ 47ಜಿ ವಿಭಾಗ, 62ನೇ ವಿಭಾಗ ಅಥವಾ 65ನೇ ವಿಭಾಗದ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧದ ಹೊರತಾದ ಯಾವುದೇ ಅಪರಾಧವನ್ನು, (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಲೆಕ್ಕ ಮಾಡಿದ ಆಸ್ತಿಯ ಬೆಲೆ ಮತ್ತು ಮೌಲ್ಯವನ್ನು ಪಡೆಯುತ, ನ್ಯಾಯಾಲಯದ ಅನುಮತಿಯೊಂದಿಗೆ ರಾಜಿ ಮಾಡಿಕೊಳ್ಳಬಹುದಾಗಿದೆ:

ಆದರೆ, ಈ ಉಪ-ವಿಭಾಗದ ಅಡಿಯಲ್ಲಿ ಒಂದು ಅಪರಾಧವನ್ನು ರಾಜಿ ಮಾಡಿದರೂ, ಎರಡನೆಯ ಅಥವಾ ಮುಂದುವರಿದ ಅಪರಾಧವನ್ನು ಮಾಡಲಾಗಿದೆಯೇ ಎಂದು ನಿರ್ಧರಿಸುವ ಉದ್ದೇಶಕ್ಕಾಗಿ ಅದೇ ಅಪರಾಧವನ್ನು ಮೊದಲು ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಎರಡನೆಯ ಅಥವಾ ಮುಂದುವರಿದ ಅಂತಹ ಯಾವುದೇ ಅಪರಾಧವನ್ನು ಈ ಖಂಡದ ಅಡಿಯಲ್ಲಿ ರಾಜಿ ಮಾಡತಕ್ಕದ್ದಲ್ಲ.".

PUBLISHED BY THE SUPERINTENDENT OF GOVERNMENT PRESSES
AT THE GOVERNMENT CENTRAL PRESS, THIRUVANANTHAPURAM, 2026

This is a digitally signed Gazette.
Authenticity may be verified through https://compose.kerala.gov.in/

Digitally signed by VEERAN T
Date:2026.05.26 03:49:15 +05:30